# ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು
# KARNATAKA LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

೧೨೯ನೇ ಅಧಿವೇಶನ

129th Session

(17ನೇ ನವೆಂಬರ್ 2015)

**(17th NOVEMBER 2015)**

ಸಂಪುಟ ೪೩೮ ಕ್ರಮಾಂಕ (೨)

Volume 438 No. (2)

ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

**Karnataka Legislature Secretariat, Bengaluru**

# ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು
# KARNATAKA LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

ಿ೧೨೯ನೇ ಅಧಿವೇಶನ

129th Session

(17ನೇ ನವೆಂಬರ್ 2015)

**(17th NOVEMBER 2015)**

ಸಂಪುಟ ೪೩೮ ಕ್ರಮಾಂಕ (೨)

Volume 438 No. (2)

ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

**Karnataka Legislature Secretariat, Bengaluru**

# ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ: 17ನೇ ನವೆಂಬರ್ 2015
ಮಂಗಳವಾರ

## ವಿಷಯಾನುಕ್ರಮಣಿಕೆ

**1. ಸಂತಾಪ ಸೂಚನೆ** **1–10**

(ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಅವರ ನಿಧನ)

– ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು)

– ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)

-----------

ಕರ್ನಾಟಕ ವಿಧಾನ ಪರಿಷತ್ತು

*ಮಂಗಳವಾರ, 17ನೇ ನವೆಂಬರ್ 2015*

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಬೆಳಗ್ಗೆ 11 ಗಂಟೆ 36 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

~~~~~~~~
~~~~~~~~

## 1.ಸಂತಾಪ ಸೂಚನೆ

**ಸಭಾಪತಿಯವರು:–**

**ಪ್ರಸುತ್ತ ವಿಧಾನ ಸಭೆ ಸದಸ್ಯರಾಗಿದ್ದ ಡಾ: ಗುರುಪಾದಪ್ಪ ನಾಗಮಾರಪಲ್ಲಿ ಅವರು ದಿನಾಂಕ: 17.11.2015 ರಂದು ಬೆಳಗ್ಗೆ ಬೆಂಗಳೂರಿನ ವಿಕ್ರಮ ಆಸ್ಪತ್ರೆಯಲ್ಲಿ ಹೃದಯಘಾತದಿಂದ ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.**

1942ರ ನವೆಂಬರ್, 11ರಂದು ಬೀದರ್ ಜಿಲ್ಲೆ, ಔರದ್ ತಾಲ್ಲೂಕು, ಚಿಂತಕಿ ಹೋಬಳಿಯ ನಾಗಮಾರಪಲ್ಲಿಯಲ್ಲಿ ಜನಿಸಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಸಹಕಾರ ಕ್ಷೇತ್ರದಲ್ಲಿ ಅಪಾರವಾದ ಕೊಡುಗೆ ಸಲಿಸಿದ್ದರು. 1987ರಲ್ಲಿ ರಾಷ್ಟ್ರದಲ್ಲಿಯೇ ಪ್ರಥಮ ಬಾರಿಗೆ ಬೀದರ್ ಸ್ವ–ಸಹಾಯ ಗುಂಪುಗಳನ್ನು ರಚಿಸದ್ದರು. ಸುಸಜ್ಜಿತವಾದ ಮತ್ತು ಹೈಟೆಕ್ ತಂತ್ರಜ್ಞಾನವನ್ನು ಒಳಗೊಂಡ ಒಂದು ಸಹಕಾರ ತರಬೇತಿ ಕೇಂದ್ರವನ್ನು ಸ್ಥಾಪಿಸಿದ ಕೀರ್ತಿ ಇವರದ್ದಾಗಿದೆ.

ಶ್ರೀಯುತರು ನವದೆಹಲಿಯ ರಾಷ್ಟ್ರೀಯ ಸಹಕಾರಿ ಮಾರಾಟ ಮಂಡಳಿಯ ನಿರ್ದೇಶಕರಾಗಿ, ಮುಂಬಯಿನ ನ್ಯಾಷನಲ್ ಕೋ–ಆಪರೇಟಿವ್ ಯೂನಿಯನ್ ಆಫ್ ಇಂಡಿಯಾದ ಉಪಾಧ್ಯಕ್ಷರಾಗಿ, ನವದೆಹಲಿಯ ನ್ಯಾಷನಲ್ ಕೋ–ಆಪರೇಟಿವ್ ಯೂನಿಯನ್ ಆಫ್ ಇಂಡಿಯಾದ ಆಡಳಿತ ಮಂಡಳಿಯ ಸದಸ್ಯರಾಗಿ, ನಾರಂಜಾ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ, ರಾಷ್ಟ್ರೀಯ ಸಹಕಾರಿ ಮಾರಾಟ ಮಂಡಳಿಯ ನಿರ್ದೇಶಕರಾಗಿ ಹಾಗೂ ನವದೆಹಲಿಯ ಕೃಷಿಕ ಭಾರತಿ ಕೋ–ಆಪರೇಟಿವ್ ನಿಯಮಿತದ ನಿರ್ದೇಶಕರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಅಪರಲ್ ತರಬೇತಿ ಕೇಂದ್ರದ ಸ್ಥಾಪನೆ, ನಾರಂಜಾ ಸಕ್ಕರೆ ಕಾರ್ಖಾನೆ ಸ್ಥಾಪನೆ, ಸಣ್ಣ ಪ್ರಮಾಣದ ಕೈಗಾರಿಕಾ ತರಬೇತಿ ಕೇಂದ್ರವನ್ನು ಸ್ಥಾಪಿಸುವ ಮೂಲಕ ಅವರು ಬೀದರ್ ಜನತೆಗೆ ಉದ್ಯೋಗಾವಕಾಶವನ್ನು ಸೃಷ್ಟಿಸಿದ್ದರು.

1985ರಲ್ಲಿ 8ನೇ ವಿಧಾನಸಭೆಗೆ ಮೊದಲನೇ ಬಾರಿ ಔರಾದ್ ಕ್ಷೇತ್ರದಿಂದ ಎಂಟನೇ, ಒಂಭತ್ತನೇ, ಹತ್ತನೇ ಹಾಗೂ ಹನ್ನೆರಡನೇ ವಿಧಾನ ಸಭೆಗೆ ಚುನಾಯಿತರಾಗಿದ್ದರು ಹಾಗೂ ಬೀದರ್ ಉತ್ತರ ಕ್ಷೇತ್ರದಿಂದ 13ನೇ ಮತ್ತು 14ನೇ ವಿಧಾನ ಸಭೆಗೆ ಚುನಾಯಿತರಾಗಿ ಕಾರ್ಯನಿರ್ವಹಿಸುತ್ತಿದ್ದರು. ಶ್ರೀಯುತರು 1989ರಲ್ಲಿ ಗೃಹ ರಕ್ಷಕ ದಳ ಹಾಗೂ ಬಂದಿಖಾನೆ ರಾಜ್ಯ ಸಚಿವರಾಗಿ, 1996 ರಿಂದ 1998ರವರೆಗೆ ಅರಣ್ಯ ಸಚಿವರಾಗಿ ಹಾಗೂ 2005 ರಿಂದ 2006ರಲ್ಲಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಖಾತೆ ಸಚಿವರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಸಹಕಾರ ಕ್ಷೇತ್ರದ ಧುರೀಣ, ರಾಜಕೀಯ ಹಿರಿಯ ಮುತ್ಸದ್ಧಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಗಳೇ, ತಾವು ಮಂಡಿಸಿದಂತಹ ಸಂತಾಪ ಸೂಚನೆಗೆ ಬೆಂಬಲವನ್ನು ಸೂಚಿಸುತ್ತಾ, ಮೃತರ ವಿಚಾರವಾಗಿ ಒಂದೆರಡು ಮಾತುಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ತಮಗೆ ಮೊದಲು ಕೃತಜ್ಞತೆಗಳನ್ನು ಅರ್ಪಿಸಿ, ನನ್ನ ಮಾತುಗಳನ್ನು ಪ್ರಾರಂಭ ಮಾಡುತ್ತೇನೆ.

ಈ ನಾಡಿನ ಅತ್ಯಂತ ಹಿರಿಯ ಮುತ್ಸದ್ಧಿ ರಾಜಕಾರಣಿಗಳು,ಛರಾಜ್ಯಮಟ್ಟದಲ್ಲಿ ಮಾತ್ರವಲ್ಲದೇ ಇಡೀ ರಾಷ್ಟ್ರಮಟ್ಟದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಅದ್ಭುತವಾದ ಸಾಧನೆ ಮಾಡಿದಂತಹ ಡಾ||ಗುರುಪಾದಪ್ಪ ನಾಗಮಾರಪಲ್ಲಿ ಅವರು ಇಂದು ಬೆಳಗಿನ ಜಾವ 5 ಗಂಟೆಯಲ್ಲಿ ವಿಕ್ರಮ್ ಆಸ್ಪತ್ರೆಯಲ್ಲಿ ಹೃದಯಾಘಾತ ದಿಂದ ನಿಧನರಾದ ಸುದ್ದಿ ತಿಳಿದು ನನಗೆ ಬಹಳ ದಿಗ್ಭ್ರಮೆಯಾಯಿತು. ನಾನು ಆಸ್ಪತ್ರೆಗೆ ಹೋಗಿ ನನ್ನ ಅಂತಿಮ ನಮನವನ್ನು ಸಲ್ಲಿಸಿ, ದರ್ಶನ ಪಡೆದು ಬಂದಿದ್ದೇನೆ. ನಾನು ಸಹಕಾರಿ ಕ್ಷೇತ್ರದಲ್ಲಿ ಇರುವುದರಿಂದ ಬಹಳ ವರ್ಷದಿಂದ ಅವರ ಜೊತೆಯಲ್ಲಿ ನಿಕಟವಾದ ಸಂಬಂಧವನ್ನು ಹೊಂದಿದ್ದೇನೆ. ಅವರ ನಿಧನದಿಂದ ಸಾರ್ವಜನಿಕ ಬದುಕಿಗೆ ದೊಡ್ಡದಾದ ಹಾನಿಯಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ ಈ ರಾಷ್ಟ್ರದ ಸಹಕಾರಿ ಕ್ಷೇತ್ರಕ್ಕೆ ದೊಡ್ಡದಾದಂತಹ ಹಾನಿಯಾಗಿದೆ ಎಂದು ಹೇಳಬಯಸುತ್ತೇನೆ. 6 ಬಾರಿ ವಿಧಾನಸಭೆಗೆ ಆಯ್ಕೆಯಾಗಿರುವ ಅತ್ಯಂತ ಹಿರಿಯ ರಾಜಕಾರಣಿಗಳು. ಸಾರ್ವಜನಿಕ ಬದುಕಿನಲ್ಲಿ ಅತ್ಯದ್ಭುತವಾದ ಕೆಲಸವನ್ನು ಮಾಡುವುದರ ಜೊತೆಗೆ ಅನೇಕ ಖಾತೆಗಳಿಗೆ ಸಚಿವರಾಗಿ ಉತ್ತಮ ರೀತಿಯ ಸೇವೆಯನ್ನು ನಾಡಿನ ಜನತೆಗೆ ಸಲ್ಲಿಸಿರುವುದನ್ನು ನಾನು ಇಲ್ಲಿ ಸ್ಮರಿಸಿಕೊಳ್ಳುತ್ತೇನೆ. ಬೀದರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಖಾಯಂ ಅಧ್ಯಕ್ಷರಾಗಿ ಕೆಲಸವನ್ನು ಮಾಡಿದ್ದಾರೆ. ನಾರಂಜಾ ಸಕ್ಕರೆ ಕಾರ್ಖಾನೆಯ ಸ್ಥಾಪನೆಗೆ ಇವರ ಕೊಡುಗೆ ಬಹಳ ದೊಡ್ಡದು. ಕೇವಲ 18 ತಿಂಗಳಲ್ಲಿ ಆ ಸಕ್ಕರೆ ಕಾರ್ಖಾನೆಯನ್ನು ಪೂರ್ತಿ ಮಾಡಿ ಆ ಭಾಗದ ಕಬ್ಬು ಬೆಳೆಯುವ ರೈತರಿಗೆ ಮಾಡಿರುವ ಸಹಾಯವನ್ನು ಆ ಭಾಗದ ರೈತರು ನೆನೆಪಿನಲ್ಲಿ ಇಟ್ಟುಕೊಳ್ಳುತ್ತಾರೆ. ಕರ್ನಾಟಕ ರಾಜ್ಯದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ ಕೆಲಸವನ್ನು ಮಾಡಿದ್ದಾರೆ.

ನಾನು ಆ ಅಪೆಕ್ಸ್ ಬ್ಯಾಂಕ್‌ನ ನಿರ್ದೇಶಕನಾಗಿ ಕೆಲಸ ಮಾಡುವಾಗ ಅವರು ಅಪೆಕ್ಸ್ ಬ್ಯಾಂಕಿನ ಖಾಯಂ ಹಿರಿಯ ನಿರ್ದೇಶಕರಾಗಿ ಕೆಲಸ ಮಾಡಿರುವುದನ್ನು ನಾನು ಇಲ್ಲಿ ನೆನಪಿಸಿಕೊಳ್ಳುತ್ತೇನೆ. ಅದೇ ರೀತಿ Karnataka Co-operative Marketing Federation ನಿರ್ದೇಶಕರಾಗಿ ಅತ್ಯುತ್ತಮವಾದ ಸೇವೆಯನ್ನು ಸಲ್ಲಿಸಿದ್ದಾರೆ. ನಾನು ಅವರನ್ನು ಹತ್ತಿರದಿಂದ ನೋಡಿದ ಹಾಗೆ ಸ್ವ–ಸಹಾಯ ಸಂಘಗಳ ಯೋಜನೆಯನ್ನು ದೇಶದಲ್ಲಿಯೇ ಮೊದಲ ಬಾರಿಗೆ ಜಿಲ್ಲಾ ಸಹಕಾರಿ ಬ್ಯಾಂಕ್‌ಗಳಿಂದ ಪ್ರಾರಂಭ ಮಾಡಿದ ಕೀರ್ತಿ ಡಾ: ಗುರುಪಾದಪ್ಪ ನಾಗಮಾರಪಳ್ಳಿಯವರಿಗೆ ಸಲ್ಲುತ್ತದೆ

ಎನ್ನುವ ಮಾತನ್ನು ಹೇಳಬಯಸುತ್ತೇನೆ. ಅವರು ಬಡತನ ರೇಖೆಗಿಂತ ಕೆಳಗೆ ಇರುವ ಸುಮಾರು 2,12,000 ಕುಟುಂಬಗಳನ್ನು ಸ್ವ ಸಹಾಯ ಸಂಘಗಳಲ್ಲಿ ಸಂಗ್ರಹ ಮಾಡಿ, ಅದರಲ್ಲಿ 1,90,000 ಗಳಷ್ಟು ಎಸ್‌ಸಿ/ಎಸ್‌ಟಿ ಕುಟುಂಬಗಳನ್ನು ಸ್ವ ಸಹಾಯ ಸಂಘಗಳಲ್ಲಿ ತಂದು ಅವರನ್ನು ಆರ್ಥಿಕವಾಗಿ, ಸಮಾಜಿಕವಾಗಿ ಮುಂದೆ ತರಲು ದೊಡ್ಡದಾದ ಸಾಧನೆ ಮಾಡಿದ್ದಾರೆ. ನಾನು ಜಿಲ್ಲಾ ಸಹಕಾರಿ ಬ್ಯಾಂಕ್, ಬಾಗಲಕೋಟೆಯ ಸಂಸ್ಥಾಪಕ ಅಧ್ಯಕ್ಷನಾಗಿರುವ ಸಂದರ್ಭದಲ್ಲಿ ಇವರ ಸಂಘದ ಬಗ್ಗೆ ತಿಳಿದುಕೊಳ್ಳಬೇಕೆಂದು ನಾನು, ನಮ್ಮ ಉಪಾಧ್ಯಕ್ಷರು ಮತ್ತು ಉಳಿದ ಸದಸ್ಯರೆಲ್ಲರೂ ಸೇರಿ ಬೀದರ್ ಜಿಲ್ಲೆಗೆ ಹೋಗಿ ಮೂರು ದಿನಗಳ ಕಾಲ ಅಲ್ಲಿ ವಾಸ್ತವ್ಯ ಮಾಡಿ, ಅಲ್ಲಿ ಸ್ವಸಹಾಯ ಗುಂಪುಗಳು ಯಾವ ರೀತಿಯಲ್ಲಿ ಕೆಲಸ ಮಾಡುತ್ತವೆ ಎನ್ನುವುದನ್ನು ತಿಳಿದುಕೊಂಡಿದ್ದೇವೆ. ಅಲ್ಲಿ it is nothing but empowerment of women. ಅಲ್ಲಿ ಮಹಿಳೆಯನ್ನು ಸಬಲೀಕರಣ ಮಾಡುವಂತಹ ಬಹಳ ದೊಡ್ಡದಾದ ಕೆಲಸವನ್ನು ಮಾಡಿದ್ದಾರೆ. ಇಂತಹ ಕೆಲಸವನ್ನು ಕರ್ನಾಟಕ ರಾಜ್ಯದ ಬೇರೆ ಯಾವ ಜಿಲ್ಲೆಯ ಜಿಲ್ಲಾ ಬ್ಯಾಂಕ್‌ಗಳು ಮಾಡಲು ಸಾಧ್ಯವಾಗಿರುವುದಿಲ್ಲ. ನಾವು ಬೀದರ್‌ನಲ್ಲಿ ಮೂರು ದಿನಗಳ ಕಾಲ ಅವರ ಸಹಕಾರಿ ಸಂಘದಲ್ಲಿ ತರಬೇತಿಯನ್ನು ಪಡೆದು ಬಂದಿದ್ದೇವೆ. ಅವರು ತಮ್ಮ ಸಂಸ್ಥೆಗಳನ್ನು ಪಕ್ಷಾತೀತವಾಗಿ, ಜಾತ್ಯಾತೀತವಾಗಿ ಬೆಳೆಸಿದ್ದಾರೆ. ಅವರು ಸಹಕಾರಿ ತರಬೇತಿ ಸಂಸ್ಥೆಯ ಒಳಗೆ ಹೋಗಬೇಕಾದರೆ ಮಂದಿರದ ಒಳಗೆ ಹೋಗುವಾಗ ನಾವು ಹೇಗೆ ಶೂ/ಚಪ್ಪಲಿಗಳನ್ನು ಕಳಚಿಟ್ಟು ಹೋಗುತ್ತೇವೆ, ಅದೇ ರೀತಿ ಅವರ ಸಹಕಾರಿ ತರಬೇತಿ ಕೇಂದ್ರದ ಒಳಗೆ ಹೋಗಬೇಕಾದರೆ ಶೂ/ಚಪ್ಪಲಿಗಳನ್ನು ಕಳಚಿಟ್ಟು ಹೋಗಬೇಕು. ಈ ಪದ್ದತಿಯನ್ನು ಅವರು ಅಲ್ಲಿ ಬೆಳೆಸಿಕೊಂಡು ಬಂದಿದ್ದಾರೆ. ಇದನ್ನು ನೋಡಿ ನನಗೆ ಆಶ್ಚರ್ಯವಾಯಿತು, ಇದು ಮಂದಿರವಲ್ಲ, ಪೂಜಾ ಸ್ಥಳವಲ್ಲ ಆದರೂ ನೀವು ಈ ರೀತಿಯ ವ್ಯವಸ್ಥೆಯನ್ನು ಏಕೆ ಮಾಡಿದ್ದೀರಿ ಎಂದು ನಾನು ಅವರನ್ನು ಕೇಳಿದೆ. ಅದಕ್ಕೆ ಅವರು ಶೂ/ಚಪ್ಪಲಿಗಳನ್ನು ಬಿಟ್ಟು ಒಳಗೆ ಬರುವುದರ ಸಂಕೇತವೇನು ಎಂದರೆ, ಒಳಗೆ ಬರಬೇಕಾದರೆ ಕಾಂಗ್ರೆಸ್, ಬಿಜೆಪಿ, ಜನತಾ ದಳ ಎನ್ನುವ ಪಕ್ಷಗಳ ಎಲ್ಲ ಚಿಂತನೆಯನ್ನು ಮರೆತು ಒಳಗೆ ಬಂದು ಇಲ್ಲಿ ಪಕ್ಷಾತೀತವಾಗಿ ಕೆಲಸವನ್ನು ಮಾಡಬೇಕು, ಇದು ಪವಿತ್ರವಾದ ಕೆಲಸ ಎಂದು ಅವರು ಹೇಳಿರುವುದನ್ನು ಇಂದು ನಾನು ಜ್ಞಾಪಿಸಿಕೊಳ್ಳುತ್ತಿದ್ದೇನೆ.

ಜಿಲ್ಲಾ ಸಹಕಾರಿ ಬ್ಯಾಂಕ್‌ನವರು root shed ಸ್ಥಾಪನೆ ಮಾಡಿ, ಗ್ರಾಮೀಣ ಭಾಗದಲ್ಲಿ ಇರುವ ನಿರುದ್ಯೋಗ ಯುವಕರಿಗೆ ತರಬೇತಿಯನ್ನು ಕೊಟ್ಟು, ಅವರಿಗೆ ಸಾಲವನ್ನು ಕೊಡಲು ಬ್ಯಾಂಕ್‌ಗಳಿಂದ loan linkage ನ್ನು ಮಾಡಿ ಯುವಕರು ತಮ್ಮ ಕಾಲ ಮೇಲೆ ತಾವು ನಿಂತು ಬದುಕನ್ನು ಸಾಗಿಸಲು ಬಹು ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ. ಜಿಲ್ಲಾ ಸಹಕಾರಿ ಬ್ಯಾಂಕ್‌ನವರು ಏನು ಮಾಡಲು

ಸಾಧ್ಯವಿದೆ ಎನ್ನುವುದಕ್ಕೆ ಇದೊಂದು role model ಎಂದು ಹೇಳಿದರೆ ತಪ್ಪಾಗುವುದಿಲ್ಲ. ಸಹಕಾರಿ ತರಬೇತಿ ಕೇಂದ್ರದಲ್ಲಿ ಗ್ರಾಮೀಣ ಭಾಗದ ಮಹಿಳೆಯರಿಗೆ ಹೊಲಿಗೆ ಇತ್ಯಾದಿ ಅನೇಕ ಕಸಬುಗಳ ತರಬೇತಿಯನ್ನು ಕೊಟ್ಟು, ಗ್ರಾಮೀಣ ಮಹಿಳೆಯರು ತಮ್ಮ ಕಾಲ ಮೇಲೆ ನಿಂತುಕೊಳ್ಳುವಂತಹ ಕೆಲಸವನ್ನು ಮಾಡಿದ್ದಾರೆ. ಸಮಾಜದಲ್ಲಿ ಇವತ್ತು ಪಿತೃ ಪ್ರಧಾನ ಕುಟುಂಬ ಎಂದು ಹೇಳುವುದನ್ನು ಬೀದರ್ ಜಿಲ್ಲಾ ಸ್ತ್ರೀ ಶಕ್ತಿ ಸಂಘಗಳು ಸುಳ್ಳು ಮಾಡಿವೆ. ಸ್ತ್ರೀ ಶಕ್ತಿ ಸಂಘದಲ್ಲಿ ಕೆಲಸ ಮಾಡಿದ ಮಹಿಳೆಯರಿಗೆ ಬ್ಯಾಂಕ್ ವ್ಯವಹಾರದ ಬಗ್ಗೆ ತುಂಬಾ ತಿಳುವಳಿಕೆ ಇದೆ. ಅಲ್ಲಿ ಮಾತೃ ಪ್ರಧಾನ ಕುಟುಂಬದ concept ಬಂದಿದೆ ಎಂದರೆ ತಪ್ಪಾಗುವುದಿಲ್ಲ. ನಾನು ಸ್ವತಃ ಆ ಮಹಿಳೆಯರ ಜೊತೆಯಲ್ಲಿ interaction ಮಾಡಿದೆ. ಮಹಿಳೆಯರಿಗೆ ಯಾವ ರೀತಿಯಲ್ಲಿ ತರಬೇತಿ ನೀಡಿದ್ದಾರೆ ಎಂದರೆ, ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ, ವಿದ್ಯುತ್ ಸಮಸ್ಯೆ, ರಸ್ತೆ ನಿರ್ಮಾಣದಲ್ಲಿ ಏನಾದರು ಸಮಸ್ಯೆಗಳಾದರೆ ಆ ಭಾಗದ ಜನ ಪ್ರತಿನಿಧಿಗಳಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ, ಆ ಮಹಿಳೆಯರು ಚುನಾಯಿತ ಪ್ರತಿನಿಧಿಗಳ ಮುಂಗೈ ಹಿಡಿದು ಕೇಳುವಂತಹ ಸಾಮರ್ಥ್ಯ ಅವರಿಗೆ ಇದೆ. ನಿಜವಾಗಿಯು women empowerment ನ್ನು ನಾನು ಅಲ್ಲಿ ಕಂಡುಕೊಂಡಿದ್ದೇನೆ. ನಮ್ಮ ಸರ್ಕಾರ ಸ್ತ್ರೀ ಶಕ್ತಿ ಸಂಘಗಳಿಗೆ ಚಾಲನೆ ನೀಡಿ, ಇವರಿಗೂ ಸಹಕಾರಿ ಬ್ಯಾಂಕ್‌ಗಳಿಂದ ಸಾಲ ನೀಡಿದ್ದಾರೆ.

ಇವರನ್ನು ನಾನು ಏಕೆ ಪಕ್ಷಾತೀತ ಎಂದು ಹೇಳುತ್ತೇನೆ ಎಂದರೆ, ಅಂದು ಅವರು ನಮ್ಮ ಪಕ್ಷದಲ್ಲಿದ್ದರು, ಆ ಸಂಘದ ಉಪಾಧ್ಯಕ್ಷರು ಭಾರತೀಯ ಜನತಾ ಪಕ್ಷದವರಾಗಿದ್ದರು. ಅನೇಕ ವರ್ಷಗಳಿಂದ ಆ ಜೋಡಿ ಹಾಗೆಯೇ ಬಂದಿತ್ತು. ಈ ರೀತಿಯ ಸಹಕಾರಿ ಕ್ಷೇತ್ರವನ್ನು ಇವರು ಬೆಳೆಸಿದ್ದಾರೆ. ಅದಕ್ಕಿಂತ ಮಿಗಿಲಾಗಿ ತಾವು ಹೇಳಿದ ಹಾಗೆ, ಇವರು ಕೃಷಿಕರು. VVV Clubs (Vikasa Volunteers Vahini Clubs) ಎಂದರೆ, ಅಂದಾಜು 350 farmers club ಗಳನ್ನು ಆ ಜಿಲ್ಲೆಯಲ್ಲಿ ಸ್ಥಾಪನೆ ಮಾಡಿದ್ದಾರೆ. ಆ ಜಿಲ್ಲೆಯ ಸಹಕಾರಿ ಬ್ಯಾಂಕ್‌ನ ಪರವಾಗಿಯೇ farmers club ರಚನೆ ಮಾಡಿದ್ದಾರೆ. ಆ farmers club ಗಳನ್ನು ನಬಾರ್ಡ್‌ಗೆ linkage ಮಾಡಿದ್ದಾರೆ. Sponsor ಮಾಡುವಾಗ ನಬಾರ್ಡ್ ಸಹಾಯ ಮಾಡುತ್ತದೆ. ಆ ಕ್ಲಬ್‌ನವರು ಆ ಭಾಗದಲ್ಲಿಯ ಕೃಷಿ, ತೋಟಗಾರಿಕಾ ವಿಶ್ವವಿದ್ಯಾಲಯಗಳ ಕೃಷಿ ವಿಜ್ಞಾನಿಗಳನ್ನು ಕರೆಯಿಸಿ ರೈತರಿಗೆ ತರಬೇತಿ ಕೊಡಿಸುವಂತಹ ಮಹತ್ತರವಾದ ಕೆಲಸವನ್ನು ಮಾಡುತ್ತಿದ್ದಾರೆ. ಸಾಲ ಮರುಪಾವತಿ ಮಾಡಲು farmers club ನವರು ಸಹಾಯ ಮಾಡುತ್ತಿದ್ದಾರೆ.

ಇಷ್ಟೊಂದು ಕೆಲಸ ಮಾಡಿ ಬಹಳ ಪರಿಣಾಮವನ್ನು ಬೀರಿದಂತಹ ವ್ಯಕ್ತಿ ಡಾ: ಗುರುಪಾದಪ್ಪ ನಾಗಮಾರಪಳ್ಳಿ ನಮ್ಮನ್ನು ಅಗಲಿದ್ದಾರೆ. ಅವರು ಸಹಕಾರಿ ಕ್ಷೇತ್ರದಲ್ಲಿ ಮಾಡಿರುವ ಸಾಧನೆಗಾಗಿ ಕೃಷಿ ವಿಶ್ವವಿದ್ಯಾನಿಲಯದವರು ಅವರಿಗೆ ಡಾಕ್ಟರೆಟ್ ಪಧವಿಯನ್ನು ಕೊಟ್ಟಿದ್ದಾರೆ. ಆ ಭಾಗದ ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಅವರು ಇಲ್ಲಿಯವರೆಗೆ ಅಧ್ಯಕ್ಷರಾಗಿ ಕೆಲಸವನ್ನು ಮಾಡುತ್ತಿದರು. ಇದು ಅಲ್ಲದೆ ಅವರು 8 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಿ central grid ಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ. ಇವರನ್ನು ನಾನು ರಾಷ್ಟ್ರ ಮಟ್ಟದ ಸಹಕಾರಿ ಎಂದು ಏಕೆ ಹೇಳಿದೆ ಎಂದರೆ, ಇವರು IFFCO (Indian Farmer's Fertilizer Co-operative Limited) and KRIBHCO (Krishak Bharati Cooperative Limited) ಎರಡಕ್ಕೂ ನಿರ್ದೇಶಕರಾಗಿದ್ದಾರೆ. ಸಹಕಾರಿ ಕ್ಷೇತ್ರದಲ್ಲಿ ಅದ್ಭುತ ಸಾಧನೆಯನ್ನು ಮಾಡಿರುವಂತಹ, ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರನ್ನು ಗಳಿಸಿದಂತಹ IFFCO and KRIBHCO ಸಂಸ್ಥೆಯಲ್ಲಿಯು ಕೂಡಾ ಅವರು ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. NAFED (National Agricultural Co-operative Marketing Federation of India) ಕ್ಕೂ ಕೂಡಾ ಅವರು ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಹೇಳುತ್ತಾ ಹೋದರೆ ಇನ್ನು ಬಹಳ ವಿಚಾರಗಳು ಇವೆ. ಅವರು ರಾಜ್ಯ, ರಾಷ್ಟ್ರ ಮಟ್ಟದ ಸಹಕಾರಿ ಸಂಸ್ಥೆಗಳ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಅವರು ಈ ರಾಷ್ಟ್ರದ ಹಿರಿಯ ಸಹಕಾರಿಯಾಗಿ ಕೆಲಸ ಮಾಡಿದ್ದಾರೆ. ಅವರು 73 ವರ್ಷಗಳನ್ನು ಪೂರೈಸಿ 74ನೇ ವಸಂತಕ್ಕೆ ಕಾಲಿಟ್ಟ ವಿಶೇಷ ಸಂಚಿಕೆಯನ್ನು ನವೆಂಬರ್ 11ರಂದು ನಾವು ನೋಡಿದ್ದೇವೆ. 73 ಅರ್ಥಪೂರ್ಣವಾದ ವಸಂತಗಳನ್ನು ಪೂರೈಸಿ 74ಕ್ಕೆ ಕಾಲಿಟ್ಟ ಅವರಿಂದ ನಾನು ಬಹಳ ನಿರೀಕ್ಷೆಯನ್ನು ಮಾಡಿದೆ. ಸಹಕಾರಿ ಕ್ಷೇತ್ರವನ್ನು ಇನ್ನೂ ಹೆಚ್ಚು ಶಕ್ತಿಶಾಲಿಯಾಗಿ, ಪ್ರಭಾವಿಯಾಗಿ ಮಾಡಿ ಕಟ್ಟಕಡೆಯ ಮನುಷ್ಯನಿಗೂ ಸಹಾಯ ಮಾಡುವಂತಹ ಸಹಕಾರಿ ನಮ್ಮ ನಾಡಿನಲ್ಲಿ ಇದ್ದದ್ದು ನಮ್ಮ ಪುಣ್ಯ ಎಂದು ನಾನು ಈಗಾಗಲೇ ಹೇಳಿದ್ದೇನೆ. ಆದರೆ ಇಂದು ನಾವು ಅವರನ್ನು ಕಳೆದುಕೊಂಡಿದ್ದೇವೆ. ಅವರ ಸಾವು ನಿಜವಾಗಿಯು ಸಹಕಾರಿ ಕ್ಷೇತ್ರಕ್ಕೆ ಬರಸಿಡಿಲು ಬಡೆದಂತಾಗಿದೆ; ಈ ನಾಡಿನ ಅತ್ಯಂತ ಹಿರಿಯ ರಾಜಕೀಯ ಮುತ್ಸದ್ಧಿಯನ್ನು ನಾವು ಕಳೆದುಕೊಂಡಿದ್ದೇವೆ. ಇವತ್ತು ಅವರ ಆತ್ಮಕ್ಕೆ ಭಗವಂತ ಸದ್ಗತಿಯನ್ನು ಕರುಣಿಸಲಿ ಮತ್ತು ಅವರ ಅಗಲಿಕೆಯ ನೋವನ್ನು ಅವರ ಕುಟುಂಬ ಸದಸ್ಯರು ಮತ್ತು ಅಭಿಮಾನಿಗಳು ಹಾಗೂ ಸ್ನೇಹಿತರು, ಹಿತೈಷಿಗಳು ಹಾಗು ಸಹಕಾರಿ, ಸಾರ್ವಜನಿಕ ಕ್ಷೇತ್ರದಲ್ಲಿರುವವರೆಲ್ಲರಿಗೂ ದು:ಖವನ್ನು ಭರಿಸುವ ಶಕ್ತಿಯನ್ನು ಕಲ್ಪಿಸಲಿ ಎಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇವತ್ತು ಬೆಳಿಗ್ಗೆ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಘುನಾಥರಾವ್ ಮಲ್ಕಾಪೂರೆಯವರು ದೂರವಾಣಿ ಮೂಲಕ ಡಾ: ಗುರುಪಾದಪ್ಪ ನಾಗಮಾರಪಲ್ಲಿಯವರು ಹೃದಯಾಘಾತದಿಂದ ನಿಧನರಾದರೆಂದು ತಿಳಿಸಿದಾಗ ನನಗೆ ದಿಗ್ಭ್ರಮೆಯಾಯಿತು. ಮೊದಲನೆಯ ಬಾರಿ ನಾನು ವಿಧಾನ ಸಭೆಗೆ ಆಯ್ಕೆಯಾದಾಗ ಅವರು ಮಂತ್ರಿಯಾಗಿದ್ದರು. ನಾನು ಅವರಿಗೆ ದೂರವಾಣಿ ಮಾಡಿ 'ವಿಧಾನ ಸೌಧದಲ್ಲಿ ಯಾವ ಸಮಯಕ್ಕೆ ಸಿಗುತ್ತೀರಿ?' ಎಂದು ಕೇಳಿದೆ. ಆಗ ಅವರು 'ಇನ್ನೂ ಸಮಯ ಒಂಭತ್ತು–ಒಂಭತ್ತೂವರೆಯಾಗಿರುವುದರಿಂದ ನಾನು ಮನೆಯಲ್ಲಿಯೇ ಇದ್ದೇನೆ, ತಾವು ಮನೆಗೆ ಬನ್ನಿ, ಇಲ್ಲಿಯೇ ತಮ್ಮ ಕೆಲಸ ಮಾಡಿಕೊಡುತ್ತೇನೆ' ಎಂದು ಹೇಳಿದರು. ನಾನು ಬೆಂಗಳೂರಿಗೆ ಬಹಳ ಸಲ ಬಂದಿರಲಿಲ್ಲ. ಅವರೇ ನನನ್ನು ಕರೆದುಕೊಂಡು ಹೋಗಲು ಶಾಸಕರ ಭವನಕ್ಕೆ ಕಾರನ್ನು ಕಳುಹಿಸಿಕೊಟ್ಟರು. ನಾನು ಅವರ ಕಾರಿನಲ್ಲಿಯೇ ಅವರ ಮನೆಗೆ ಹೋದಾಗ ಕೆಳಗೆ ನನಗಾಗಿ ಕಾಯುತ್ತಿದ್ದರು. ನನಗೆ ನನ್ನ ಕೆಲಸ ಆದರೆ ಸಾಕಾಗಿತ್ತು. ನನ್ನ ಜೊತೆಯಲ್ಲಿ ಬಂದವರನ್ನು ಅವರಿಗೆ ಪರಿಚಯ ಮಾಡಿಸಿ, ಅವರ ಕೆಲಸದ ಬಗ್ಗೆ ಚೀಟಿ ಕೊಟ್ಟೆ. ಆಗ ಅವರು 'ಇದು ಇರಲಪ್ಪ, ಮೊದಲು ತಿಂಡಿ ತಿನ್ನೋಣ ಬಾ' ಎಂದು ಕರೆದುಕೊಂಡು ಹೋದರು ಒಟ್ಟಿಗೆ ತಿಂಡಿ ತಿಂದೆವು. ಅವರು ನನ್ನ ಕೆಲಸವನ್ನೂ ಮಾಡಿಕೊಟ್ಟರು. ಮಂತ್ರಿಸ್ಥಾನ ಚುನಾಯಿತ ಪ್ರತಿನಿಧಿ ಸ್ಥಾನ ಶಾಶ್ವತ ಅಲ್ಲ, ಸ್ನೇಹ ಬಹಳ ಮುಖ್ಯ. ಎಲ್ಲರ ಜೊತೆ ಕೂಡ ಪಕ್ಷಭೇದ ಮರೆತು ಸ್ನೇಹ ಬೆಳೆಸಬೇಕು ಎಂಬ ಪಾಠವನ್ನು ನಾನು ಅವರಿಂದ ಕಲಿತೆ. ನನಗೆ ಬಹಳ ಸಂತೋಷ. ಅವರ ಪಕ್ಷ ಬೇರೆ, ನಮ್ಮ ಪಕ್ಷ ಬೇರೆ. ಮಂತ್ರಿಗಳ ಜೊತೆ ಒಡನಾಟ ಕೂಡ ಇರಲಿಲ್ಲ. ಆದರೆ ಒಬ್ಬ ಮಂತ್ರಿ ಹೇಗೆ ಇರಬೇಕೆನ್ನುವುದನ್ನು ನಾನು ಅವರನ್ನು ನೋಡಿ ಕಲಿತೆ. ಅನೇಕ ಮಂತ್ರಿಗಳು ಪಕ್ಷದ ಶಾಸಕರ ಬಗ್ಗೆ ಒಂದು ರೀತಿ ತಾತ್ಸಾರದಲ್ಲಿರುತ್ತಾರೆ ಎಂಬ ಅಂಶವನ್ನು ಕೇಳಿದ್ದೇನೆ. ಆದರೆ ಪಕ್ಷಭೇದ ಮರೆತು ಸಾಮಾನ್ಯ ಜನರ ಸಮಸ್ಯೆ ತೆಗೆದುಕೊಂಡು ಬಂದ ಸಮಯದಲ್ಲಿ ಸಹಕಾರ ಕೊಡಬೇಕು ಎಂದು ತೋರಿಸಿದ ಅವರನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳುತ್ತೇನೆ. ಅದು ನನ್ನ ಜೀವನಕ್ಕೆ ಪಾಠ ಆಯಿತು. ಮಾನ್ಯ ಸಭಾನಾಯಕರು ಸಹಕಾರಿ ಕ್ಷೇತ್ರದಲ್ಲಿ ಅವರ ಸಾಧನೆ ಹೇಳುವುದಕ್ಕೆ ಸಾಲದು ಎಂಬಂತೆ ಹೇಳಿದ್ದಾರೆ. ಅಷ್ಟರಮಟ್ಟಿಗೆ ಸಾಧನೆಗಳನ್ನು ಮಾಡಿದ್ದು, ಸಕ್ಕರೆ ಕಾರ್ಖಾನೆ ಇರಬಹುದು. ಇತ್ತೀಚೆಗೆ ಅವರು ಸಹಕಾರಿ ಕ್ಷೇತ್ರದಲ್ಲಿ ಒಂದು ಆಸ್ಪತ್ರೆಯನ್ನು ತೆರೆದು, ಬಡ ಜನರಿಗೆ ಸಾಧ್ಯವಾದಷ್ಟು ಉಚಿತವಾಗಿ ಅಥವಾ ಕಡಿಮೆ ಹಣ ತೆಗೆದುಕೊಂಡು ಚಿಕಿತ್ಸೆಗೆ ಅನುಕೂಲವಾಗುವ ರೀತಿಯಲ್ಲಿ ಆಸ್ಪತ್ರೆಯೊಂದನ್ನು ಪ್ರಾರಂಭ ಮಾಡಿದ್ದಾರೆ. ಅಂದರೆ ಒಬ್ಬರೇ ಬದುಕುವುದಲ್ಲ, ಸಮಾಜಕ್ಕೆ ಬದುಕಲು ಸಹಕಾರಿಯಾಗಬೇಕು ಎಂದು ತೋರಿಸಿಕೊಟ್ಟ ವ್ಯಕ್ತಿ ಅವರು ಎಂಬುದನ್ನು ನಾವು ನೆನಪು ಮಾಡಿಕೊಳ್ಳಬೇಕು. ಅದಾದ ನಂತರ ನಮ್ಮ ಪಕ್ಷಕ್ಕೆ ಬಂದ ನಂತರ ಅವರ ಮನಸ್ಸಿನಲ್ಲಿ

ಗೊಂದಲಗಳಿದ್ದವು. ಲೋಕಸಭೆ ಮತ್ತು ವಿಧಾನ ಸಭೆ ಚುನಾವಣೆಗಳಲ್ಲಿ ಸ್ಪರ್ಧಿಸುವ ಸಂದರ್ಭದಲ್ಲಿ ಗೊಂದಲಗಳು ಇದ್ದಾಗ ಯಾವ ಮುಜುಗರ ಇಟ್ಟುಕೊಳ್ಳದೇ ನಾಯಕರುಗಳ ಜೊತೆ ಸ್ಪಷ್ಟವಾಗಿ ಈ ರೀತಿ ಗೊಂದಲಗಳು ಇವೆ, ಯಾವ ರೀತಿ ನಿವಾರಣೆ ಮಾಡಿಕೊಳ್ಳಬೇಕು ಎಂದು ಚರ್ಚಿಸಿ ಪರಿಹರಿಸಿಕೊಳ್ಳುತ್ತಿದ್ದರು. ಅವರನ್ನು ನೋಡಿ ನನಗೆ ಆಶ್ಚರ್ಯ ಆಯಿತು. ಏಕೆಂದರೆ ಇವತ್ತು ಒಂದು ಪಕ್ಷದಲ್ಲಿರುವ ನಾಯಕರು ಒಳಗೊಳಗೆ ಬಡಿದಾಡಿಕೊಳ್ಳುವುದನ್ನು ನಾವು ನೋಡುತ್ತಿದ್ದೇವೆ. ಒಂದು ಪಕ್ಷದಲ್ಲಿದ್ದು ಮುಕ್ತವಾಗಿ, ಒಮ್ಮನಸ್ಸಿನಿಂದ ಕೆಲಸ ಮಾಡಬೇಕು ಎಂಬ ದೃಷ್ಟಿಯಿಂದ ನಾಯಕರ ಜೊತೆ ಮುಕ್ತವಾಗಿ ಮಾತನಾಡುವಂತಹ ವ್ಯಕ್ತಿಯಾಗಿದ್ದರು.

ನಾನು 2–3 ಅಂಶಗಳನ್ನು ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ಪಕ್ಷದ ಜೊತೆ ಇರುವ ಸಂದರ್ಭದಲ್ಲಿ ಪಕ್ಷಕ್ಕೆ ನಿಷ್ಠೆ ಮತ್ತು ಎರಡನೆಯದಾಗಿ ಸಹಕಾರಿ ಕ್ಷೇತ್ರದ ಮುಖಾಂತರ ಇಡೀ ಸಮಾಜದ ಸೇವೆ ಹಾಗೂ ಮೂರನೆಯದಾಗಿ ಯಾವುದೇ ಪಕ್ಷದಲ್ಲಿದ್ದರೂ ಸ್ನೇಹಜೀವಿಯಾಗಿ ಕೆಲಸ ಮಾಡಬೇಕು ಎನ್ನುವ ವ್ಯವಸ್ಥೆಗಳನ್ನು ಮಾನ್ಯ ಗುರುಪಾದಪ್ಪನವರ ಜೀವನದ ಮೂಲಕ ನನ್ನ ಜೀವನದಲ್ಲಿ ಪಾಠ ಕಲಿತಿದ್ದೇನೆ ಎಂದು ಅವರನ್ನು ನೆನಪು ಮಾಡಿಕೊಳ್ಳುತ್ತೇನೆ. ಇವತ್ತು ಒಬ್ಬ ಸ್ನೇಹಜೀವಿ ನಮ್ಮನ್ನು ಅಗಲಿರುವ ಸಂದರ್ಭದಲ್ಲಿ ವೈಯಕ್ತಿಕವಾಗಿ ನನಗೆ ಮತ್ತು ನನ್ನ ಪಕ್ಷಕ್ಕೆ, ಸಮಾಜಕ್ಕೆ, ರಾಜ್ಯಕ್ಕೆ ಹಾಗೂ ದೇಶಕ್ಕೆ ದೊಡ್ಡ ನಷ್ಟವಾಗಿದೆ ಎಂದು ಭಾವಿಸುತ್ತಾ, ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಅವರ ಕುಟುಂಬಕ್ಕೆ ಭಗವಂತ ಆ ನೋವನ್ನು ಸಹಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಹೆಚ್.ಎಸ್. ಮಹದೇವಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು ಸಹಕಾರಿ ಕ್ಷೇತ್ರದ ಸಚಿವನಾಗಿರುವುದರಿಂದ ಒಂದೆರಡು ಮಾತುಗಳನ್ನು ಹೇಳಲು ಅವಕಾಶ ಕೊಡಬೇಕು.

**ಸಭಾಪತಿಯವರು:–** ಬೇಡ, ನಮ್ಮಲ್ಲಿ ಆ ಪದ್ಧತಿ ಇಲ್ಲ. ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಸದನದಲ್ಲಿ ಹಾಜರಿದ್ದವರೆಲ್ಲರೂ ಎದ್ದುನಿಂತು ಒಂದು ನಿಮಿಷ ಮೌನಾಚರಣೆಯಲ್ಲಿ ಪಾಲ್ಗೊಂಡರು)**

ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು. ಅಗಲಿದ ವ್ಯಕ್ತಿಯ ಗೌರವಾರ್ಥ ಇಂದು ಸದನದ ಕಾರ್ಯಕಲಾಪವನ್ನು ಇಲ್ಲಿಗೆ ಮುಕ್ತಾಯಗೊಳಿಸಿ ನಾಳೆ ಬೆಳಗ್ಗೆ 11–00 ಗಂಟೆಯವರೆಗೆ ಸದನವನ್ನು ಮುಂದೂಡುತ್ತೇನೆ.

**(ಸದನವು ಬೆಳಗ್ಗೆ 11 ಗಂಟೆ 56 ನಿಮಿಷಕ್ಕೆ ಮುಕ್ತಾಯಗೊಂಡು ಪುನ:
ದಿನಾಂಕ 18 ನೇ ನವೆಂಬರ್ ಮಾಹೆ 2015ರ ಬುಧವಾರದಂದು ಬೆಳಿಗ್ಗೆ 11–00
ಗಂಟೆಗೆ ಸೇರಲು ನಿಶ್ಚಯಿಸಿತು)**